2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 145/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸುರೇಶ್ ಕುಮಾರ್ ಪಿ | ಪಿಡಬ್ಲೂ -18 |
| ತಂದೆಯ ಹೆಸರು | - | ಪುಟ್ಟಸ್ವಾಮಿ | ಸಿಡಬ್ಲೂ - 37 |
| ವಯಸ್ಸು | - | 44 ವರ್ಷ | |
| ಉದ್ಯೋಗ | - | ಪೊಲೀಸ್ ನಿರೀಕ್ಷಕರು,<br>ಸಂಚಾರ ಉತ್ತರ ಠಾಣೆ ಮಂಗಳೂರು | |
| ವಾಸ ಸ್ಥಳ | - | ಮಂಗಳೂರು | |

ದಿನಾಂಕಃ **02.03.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2019 ನೇ ಇಸವಿ ಜುಲೈ ತಿಂಗಳಿನಿಂದ 2020 ನೇ ಇಸವಿ ಸೆಪ್ಟೆಂಬರ್ ತಿಂಗಳಿನವರೆಗೆ ಚಿಕ್ಕಮಗಳೂರು ಗ್ರಾಮಾಂತರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 04.08.2019 ರಂದು ಚಾಸಾ.35 ರವರಿಂದ ಈ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಜೋಳದಾಳ್ ಪಾಳ್ಯದ ಸುಧೀರ್ ಗೌಡ ರವರ ತೋಟದ ಕೂಲಿ ಲೈನ್ ನಲ್ಲಿ ಮೃತ ಮಗುವಿನ ತಾಯಿ ಫ್ರಾಸಾ.4 ರವರು ವಾಸವಿದ್ದ ಮನೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸದರಿ ಸ್ಥಳದಲ್ಲಿ ಫ್ರಾಸಾ.2 ಮತ್ತು ಫ್ರಾಸಾ.3 ರವರ ಸಮಕ್ಷಮ

ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.4 ರವರ ತೋರಿಸಿದಂತೆ ನಿಪಿ.8 ರಂತೆ ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸ್ಥಳದಲ್ಲಿದ್ದ ಮಗುವಿನ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಸಿಬ್ಬಂದಿ ಮೂಲಕ ಆ್ಯಂಬುಲೆನ್ಸ್ ನಲ್ಲಿ ಕಳುಹಿಸಿಕೊಟ್ಟಿರುತ್ತೇನೆ. ನಿಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಸಿ)ಎಂದು ಗುರುತಿಸಲಾಯಿತು. ನಿಪಿ.8 ಪಂಚನಾಮೆಯ ಕಾಲಕ್ಕೆ ನಿಪಿ.5 ಮತ್ತು ನಿಪಿ.6 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ.

3. ನಂತರ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಶವಪಂಚನಾಮೆಯನ್ನು ಜರುಗಿಸಲು ಫ್ರಾಸಾ.14, ಫ್ರಾಸಾ.15 ಮತ್ತು ಚಾಸಾ.5 ರವರಿಗೆ ನಿಪಿ.43 ರಂತೆ ನೋಟೀಸನ್ನು ಜಾರಿ ಮಾಡಿ ಸದರಿಯವರನ್ನು ಬರಮಾಡಿಕೊಂಡು ಅವರ ಸಮಕ್ಷಮ ನಿಪಿ.44 ರಂತೆ ಮಧ್ಯಾಹ್ನ 12.00 ಗಂಟೆಯಿಂದ 2.00 ಗಂಟೆಯವರೆಗೆ ಅಮಿಷಾ ಮಗುವಿನ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಆ ಸಮಯದಲ್ಲಿ ಮಗುವಿನ ದೇಹದ ಮೇಲೆ ಯಾವುದೇ ಗಾಯಗಳು ಕಂಡು ಬಂದಿರುವುದಿಲ್ಲ. ನಿಪಿ.44 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.44(ಸಿ) ಎಂದು ಗುರುತಿಸಲಾಯಿತು.

4. ಸದರಿ ಪಂಚನಾಮೆಯ ಕಾಲಕ್ಕೆ ಮಗುವಿನ ತಾಯಿಯಾದ ಫ್ರಾಸಾ.4 ರವರ ಹೇಳಿಕೆಯನ್ನು ನಿಪಿ.12 ರಂತೆ, ಫ್ರಾಸಾ.5 ರವರ ಹೇಳಿಕೆಯನ್ನು ನಿಪಿ.14 ರಂತೆ, ಫ್ರಾಸಾ.3 ರವರ

ಹೇಳಿಕೆಯನ್ನು ನಿಪಿ.40 ರಂತೆ ಪಡೆದುಕೊಂಡಿರುತ್ತೇನೆ ಮತ್ತು ನಿಪಿ.2 ರಿಂದ ನಿಪಿ.4 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ.

5. ಅದೇ ದಿನ ಆರೋಪಿಯ ಪತ್ತೆಯ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯ ಚಾಸಾ.25 ಮತ್ತು ಸಿಬ್ಬಂದಿಯವರನ್ನು ನೇಮಿಸಿ ಕಳುಹಿಸಿರುತ್ತೇನೆ. ಅದರ ಮೇರೆಗೆ ಸದರಿಯವರು ಆರೋಪಿಯನ್ನು ಅದೇ ದಿನ ಕಡೂರು ಬಸ್ ನಿಲ್ದಾಣದಲ್ಲಿ ರಾತ್ರಿ 9.30 ಗಂಟೆಗೆ ವಶಕ್ಕೆ ಪಡೆದು ರಾತ್ರಿ 10.30 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.48 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.48(ಎ) ಎಂದು ಗುರುತಿಸಲಾಯಿತು.

6. ನಂತರ ಆರೋಪಿಯನ್ನು ವಿಚಾರಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಂಚರಾದ ಫ್ರಾಸಾ.3 ಮತ್ತು ಫ್ರಾಸಾ.12 ರವರ ಸಮಕ್ಷಮ ನಿಪಿ.31 ರಂತೆ ಪಡೆದುಕೊಂಡಿರುತ್ತೇನೆ. ಸದರಿ ಸ್ವಇಚ್ಛಾ ಹೇಳಿಕೆಯಲ್ಲಿ ಆರೋಪಿ ತನ್ನೊಂದಿಗೆ ಬಂದರೆ ಕೃತ್ಯವೆಸಗಿದ ಸ್ಥಳ ಮತ್ತು ಫ್ರಾಸಾ.4 ರವರಿಂದ ಖಾಲಿ ಹಾಳೆಗೆ ಸಹಿ ಹಾಕಿಸಿಕೊಂಡ ಹಾಳೆಯನ್ನು ಆತನ ಪಿ ಟಿ ಎಸ್ ನ ಮಂಚದ ಮೇಲೆ ಬ್ಯಾಗಿನಲ್ಲಿ ಇಟ್ಟಿದ್ದು ಅದನ್ನು ತೋರಿಸಿ ಹಾಜರುಪಡಿಸುವುದಾಗಿ ತಿಳಿಸಿರುತ್ತಾನೆ. ನಿಪಿ.31 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.31(ಬಿ) ಎಂದು ಗುರುತಿಸಲಾಯಿತು. ಆಗ ಅವೇಳೆಯಾಗಿದ್ದರಿಂದ ಆರೋಪಿಯನ್ನು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸೂಕ್ತ ಬಂಧನದಲ್ಲಿ ಇರಿಸಿರುತ್ತೇನೆ.

7. ದಿನಾಂಕ 05.08.2019 ರಂದು ಪ್ರಾಸಾ.3 ಮತ್ತು ಪ್ರಾಸಾ.12 ರವರಿಗೆ ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ನನ್ನ ಕಚೇರಿಗೆ ಬರಮಾಡಿಕೊಂಡಿರುತ್ತೇನೆ. ನಿಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಸಿ) ಎಂದು ಗುರುತಿಸಲಾಯಿತು. ನಂತರ ಅವರ ಸಮಕ್ಷಮ ಆರೋಪಿಯ ಬಳಿ ಇದ್ದ ಒಂದು ಬಿಳಿ ಬಣ್ಣದ Oppo ಮೊಬೈಲ್ ಮತ್ತು ಅದರಲ್ಲಿ ಅಳವಡಿಸಲಾಗಿದ್ದ 7892615522 ಸಂಖ್ಯೆಯುಳ್ಳ ಸಿಮ್ ಅನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಆ ಬಗ್ಗೆ ನಿಪಿ.10 ರಂತೆ ಬೆಳಿಗ್ಗೆ 9.00 ಗಂಟೆಯಿಂದ 9.45 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿಪಿ.10 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಸಿ) ಎಂದು ಗುರುತಿಸಲಾಯಿತು. ನಿಪಿ.10 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ಮೊಬೈಲನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 37/2019 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.49 ಎಂದು, ಸಾಕ್ಷಿಯ ನಿಪಿ.49(ಎ) ಎಂದು ಗುರುತಿಸಲಾಯಿತು. ನಿಪಿ.10 ರ ಕಾಲಕ್ಕೆ ವಶಪಡಿಸಿಕೊಂಡ ಮೊಬೈಲನ್ನು ನೋಡುತ್ತಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

8. ನಂತರ ಸದರಿ ಪಂಚರನ್ನು ಮತ್ತು ಆರೋಪಿಯನ್ನು ಕರೆದುಕೊಂಡರು ಆರೋಪಿ ತೋರಿಸಿದ ಮಾರ್ಗದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸದರಿ ಸ್ಥಳವು ಮೇಲೆ ಹೇಳಿದಂತೆ ಸುಧೀರ್ ಗೌಡರವರ ಕಾಫಿ ತೋಟದಲ್ಲಿದ್ದ ಕೂಲಿ

ಲೈನ್ ನ ಮನೆಯಾಗಿರುತ್ತದೆ. ಸದರಿ ಸ್ಥಳವನ್ನು ಆರೋಪಿ ತೋರಿಸಿ ಸದರಿ ಮನೆಯ ಹಾಲಿನಲ್ಲಿದ್ದ ಒಂದು ಸಣ್ಣ ಉಲ್ಲನ್ ರಗ್ಗನ್ನು ಹಾಜರುಪಡಿಸಿ ತನ್ನ ಕೈಯಿಂದ ಮಗುವಿನ ಮೂಗು ಮತ್ತು ಬಾಯಿಯನ್ನು ಮುಚ್ಚಿ ಉಸಿರುಗಟ್ಟಿಸಿ ಕೊಲೆ ಮಾಡಿದ ನಂತರ ಅದು ಯಾರಿಗೂ ಗೊತ್ತಾಗಬಾರದು ಎಂದು ಸದರಿ ರಗ್ಗನ್ನು ಮಗುವಿನ ಮೇಲೆ ಹೊದ್ದಿಸಿದ್ದಾಗಿ ತಿಳಿಸಿರುತ್ತಾನೆ. ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ನಿಪಿ.23 ರಂತೆ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ರಗ್ಗನ್ನು ಅಮಾನತುಪಡಿಸಿಕೊಂಡಿರುತ್ತೇನೆ. ನಿಪಿ.23 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.23(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.24 ರಂತೆ ಫೋಟೋವನ್ನು ತೆಗೆಸಿರುತ್ತೇನೆ. ನಿಪಿ.23 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ಸಣ್ಣ ಉಲ್ಲನ್ ರಗ್ಗನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 38/2019 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.50 ಎಂದು, ಸಾಕ್ಷಿಯ ನಿಪಿ.50(ಎ) ಎಂದು ಗುರುತಿಸಲಾಯಿತು. ನಿಪಿ.23 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ಉಲ್ಲನ್ ರಗ್ಗನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಅದರ ಮೇಲೆ ಅಂಟಿಸಲಾಗಿರುವ ಚೀಟಿಯ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು.

9. ಅಲ್ಲಿಂದ ಆರೋಪಿ ಮತ್ತು ಮೇಲೆ ಹೇಳಿದ ಪಂಚರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಆರೋಪಿ ತೋರಿಸಿದ ಮಾರ್ಗದಲ್ಲಿ ಹೊರಟಿರುತ್ತೇನೆ. ಆರೋಪಿ ನಮ್ಮನ್ನು ಕಡೂರು ಪಿ ಟಿ ಎಸ್ ನ ಒಂದನೇ ಮಹಡಿಯಲ್ಲಿರುವ ತಾನು ಮಲಗುತ್ತಿದ್ದ ರೂಮ್ ನಂಬರ್ 7 ಬ್ಯಾರಕ್ ನಂಬರ್ 7 ಗೆ ಕರೆದುಕೊಂಡು ಹೋಗಿ ಅಲ್ಲಿ ಮಂಚದ ಮೇಲೆ ಇದ್ದ ಒಂದು ಬ್ಯಾಗಿನಿಂದ ತೆಗೆದು ಆತ ಪ್ರಾಸಾ.4 ರವರ ಹೆಬ್ಬೆಟ್ಟಿನ ಗುರುತನ್ನು ಪಡೆದಿದ್ದ ಎರಡು ಖಾಲಿ ಹಾಳೆಗಳನ್ನು ಹಾಜರುಪಡಿಸಿರುತ್ತಾನೆ. ಸದರಿ ಹಾಳೆಗಳಲ್ಲಿದ್ದ ಹೆಬ್ಬೆಟ್ಟಿನ ಗುರುತುಗಳಿಗೆ Q1 ಮತ್ತು Q2 ಎಂದು ನಮೂದು ಮಾಡಿ ಅವುಗಳ ಮೇಲೆ ಪಂಚರ ಸಹಿಗಳನ್ನು ಪಡೆದು ನಾನು ಸಹಿ ಮಾಡಿರುತ್ತೇನೆ. ಸದರಿ ಹಾಳೆಗಳನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ನಿಪಿ.26 ರಂತೆ ಮಧ್ಯಾಹ್ನ 1.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ನಿಪಿ.26 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.26(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಸಹಕರಿಸುವಂತೆ ಪ್ರಾಸಾ.3 ಮತ್ತು ಪ್ರಾಸಾ.12 ರವರಿಗೆ ನಿಪಿ.25 ರಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಿಪಿ.25 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.25(ಸಿ) ಎಂದು ಗುರುತಿಸಲಾಯಿತು. ನಿಪಿ.26 ಪಂಚನಾಮೆಯ ಕಾಲಕ್ಕೆ ನಿಪಿ.29 ಮತ್ತು ನಿಪಿ.30 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ. ನಿಪಿ.26 ಪಂಚನಾಮೆಯ ಕಾಲಕ್ಕೆ

ವಶಪಡಿಸಿಕೊಂಡ ಹಾಳೆಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.27 ಮತ್ತು ನಿಪಿ.28 ಎಂದು ಗುರುತಿಸಲಾಗಿದ್ದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.27(ಸಿ) ಮತ್ತು ನಿಪಿ.28(ಸಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಹಾಳೆಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 38(ಎ)/2019 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.51 ಎಂದು, ಸಾಕ್ಷಿಯ ನಿಪಿ.51(ಎ) ಎಂದು ಗುರುತಿಸಲಾಯಿತು.

10. ದಿನಾಂಕ 06.08.2019 ರಂದು ಪಿರ್ಯಾದಿಯ ಮತ್ತು ಪ್ರಾಸಾ.4 ರವರ ಮರು ಹೇಳಿಕೆಗಳನ್ನು ನಿಪಿ.7 ಮತ್ತು ನಿಪಿ.13 ರಂತೆ ಪಡೆದುಕೊಂಡಿರುತ್ತೇನೆ.

11. ದಿನಾಂಕ 07.08.2019 ರಂದು ಪ್ರಾಸಾ.12 ರವರನ್ನು ಠಾಣೆಗೆ ಬರಮಾಡಿಕೊಂಡು ಅವರ ಹೇಳಿಕೆಯನ್ನು ನಿಪಿ.32 ರಂತೆ ಪಡೆದುಕೊಂಡಿರುತ್ತೇನೆ. ಮೃತ ಮಗುವಿನ ತಂದೆ ಯಾರೆಂದು ತಿಳಿಯಲು ಡಿ ಎನ್ ಎ ಪರೀಕ್ಷೆ ಮಾಡಿಸಲು ಆಕೆಯ ಬಲತೊಡೆಯ ಮೂಳೆಯನ್ನು ಸಂಗ್ರಹಿಸುವ ಸಲುವಾಗಿ ದಫನ್ ಮಾಡಿದ್ದ ಮಗುವಿನ ದೇಹವನ್ನು ಹೊರತೆಗೆಯಲು ಸಹಕರಿಸುವಂತೆ ಪ್ರಾಸಾ.16 ರವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ.52 ಎಂದು, ಸಾಕ್ಷಿಯ

ನಿಪಿ.52(ಎ) ಎಂದು ಗುರುತಿಸಲಾಯಿತು.

12. ದಿನಾಂಕ 08.08.2019 ರಂದು ಚಿಕ್ಕಮಗಳೂರು ನಗರಸಭೆಯ ಆಯುಕ್ತರಿಗೆ ಮಗುವಿನ ಶವವನ್ನು ಹೊರತೆಗೆಯಲು ಪೌರ ಕಾರ್ಮಿಕರವನ್ನು ನೇಮಿಸಿ ಕಳುಹಿಸುವಂತೆ ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ.53 ಎಂದು, ಸಾಕ್ಷಿಯ ನಿಪಿ.53(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಡಿ ಎನ್ ಎ ಪರೀಕ್ಷೆಗಾಗಿ ಮಗುವಿನ ಬಲತೊಡೆಯ ಮೂಳೆಯನ್ನು ಶೇಖರಿಸಿಕೊಡಲು ವೈದ್ಯರನ್ನು ನೇಮಿಸಿ ಕಳುಹಿಸುವಂತೆ ಮನವಿಯನ್ನು ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ.54 ಎಂದು, ಸಾಕ್ಷಿಯ ನಿಪಿ.54(ಎ) ಎಂದು ಗುರುತಿಸಲಾಯಿತು.

13. ಅದರಂತೆ ಸಂಬಂಧಿಸಿದ ಅಧಿಕಾರಿಗಳು ದಿನಾಂಕ 10.08.2019 ರಂದು ಮಗುವಿನ ಶವವನ್ನು ಹೊರತೆಗೆಯಲು ದಿನಾಂಕವನ್ನು ನಿಗದಿಪಡಿಸಿರುತ್ತಾರೆ. ಅದರಂತೆ ನಾನು ರಾಮನಹಳ್ಳಿಯ ಮುಸ್ಲಿಂ ಸ್ಮಶಾನಕ್ಕೆ ಭೇಟಿ ನೀಡಿರುತ್ತೇನೆ. ಅಲ್ಲಿಗೆ ಪ್ರಾಸಾ.3 ಮತ್ತು ಪ್ರಾಸಾ.15 ರವರನ್ನು ಪಂಚರಾಗಿ ಬರಮಾಡಿಕೊಂಡಿರುತ್ತೇನೆ. ಪ್ರಾಸಾ.11 ಮತ್ತು ಚಾಸಾ.15 ರವರು ಶವವನ್ನು ಹೊರತೆಗೆಯಲು ಸಹಕರಿಸಲು ನಗರಸಭೆಯಿಂದ ನಿಯುಕ್ತರಾಗಿ ಬಂದಿರುತ್ತಾರೆ. ಅಲ್ಲಿಗೆ ಪ್ರಾಸಾ.16 ತಹಶೀಲ್ದಾರ್ ಮತ್ತು ಚಾಸಾ.19 ವೈದ್ಯರು

ಬಂದಿರುತ್ತಾರೆ. ಸ್ಥಳದಲ್ಲಿ ಹಾಜರಿದ್ದ ಪ್ರಾಸಾ.3 ರವರು ಮೃತ ಮಗುವನ್ನು ದಫನ್ ಮಾಡಲಾಗಿದ್ದ ಸ್ಥಳವನ್ನು ತೋರಿಸಿರುತ್ತಾರೆ. ಅಲ್ಲಿ ಪ್ರಾಸಾ.16 ರವರ ಸಮಕ್ಷಮ ಪ್ರಾಸಾ.11 ಮತ್ತು ಚಾಸಾ.15 ರವರು ದಫನ್ ಮಾಡಲಾಗಿದ್ದ ಮಗುವಿನ ಶವವನ್ನು ಹೊರತೆಗೆದಿರುತ್ತಾರೆ. ನಂತರ ಚಾಸಾ.15 ರವರು ಮಗುವಿನ ಬಲಕಾಲಿನ ತೊಡೆಯ ಮೂಳೆಯನ್ನು ಡಿ ಎನ್ ಎ ಪರೀಕ್ಷೆಯ ಸಲುವಾಗಿ ಶೇಖರಿಸಿಕೊಟ್ಟಿರುತ್ತಾರೆ. ಆ ಬಗ್ಗೆ ನಾನು ಸ್ಥಳದಲ್ಲಿ ನಿಪಿ.21 ರಂತೆ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ಮೂಳೆಯನ್ನು ಅಮಾನತುಪಡಿಸಿಕೊಂಡಿರುತ್ತೇನೆ. ನಿಪಿ.21 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಡಿ) ಎಂದು ಗುರುತಿಸಲಾಯಿತು. ಸದರಿ ಮೂಳೆಯನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 40/2019 ರಲ್ಲಿ ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.55 ಎಂದು, ಸಾಕ್ಷಿಯ ನಿಪಿ.55(ಎ) ಎಂದು ಗುರುತಿಸಲಾಯಿತು.

14. ಸದರಿ ಮೂಳೆಯನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಅದನ್ನು ಸೂಕ್ತ ರೀತಿಯಲ್ಲಿ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ Cold storage ನಲ್ಲಿ ಇರಿಸಿರುತ್ತೇನೆ. ಅದೇ ದಿನ ಅಂದರೆ 10.08.2019 ರಂದು ಪ್ರಾಸಾ.6 ಮತ್ತು ಪ್ರಾಸಾ.5 ರವರ ಹೇಳಿಕೆಗಳನ್ನು ನಿಪಿ.15 ಮತ್ತು ನಿಪಿ.16 ರಂತೆ ಪಡೆದುಕೊಂಡಿರುತ್ತೇನೆ. ದಿನಾಂಕ 16.08.2019 ರಂದು ಪ್ರಾಸಾ.3 ರವರ ಸಿ ಆರ್ ಪಿ ಸಿ ಕಲಂ 164 ರಡಿಯಲ್ಲಿ

ದಾಖಲಿಸುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಪ್ರಾಸಾ.3 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದರಂತೆ ಚಿಕ್ಕಮಗಳೂರು ಪ್ರಧಾನ ಹೆಚ್ಚುವರಿ ಸಿವಿಲ್‌ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರು ಸಿ ಆರ್ ಪಿ ಸಿ ಕಲಂ 164 ರಡಿಯಲ್ಲಿ ದಾಖಲು ಮಾಡಿದ ಪ್ರಾಸಾ.3 ರವರ ಹೇಳಿಕೆಯನ್ನು ನಿಪಿ.41 ರಂತೆ ಪಡೆದುಕೊಂಡಿರುತ್ತೇನೆ. ಅದೇ ದಿನ ಪ್ರಾಸಾ.3 ರವರ ಮರುಹೇಳಿಕೆಯನ್ನು ನಿಪಿ.42 ರಂತೆ ನಾನು ಪಡೆದುಕೊಂಡಿರುತ್ತೇನೆ.

15. ದಿನಾಂಕ 18.08.2019 ರಂದು ಚಾಸಾ.20 ರವರಿಗೆ ಮನವಿ ಸಲ್ಲಿಸಿ ಕೃತ್ಯ ನಡೆದ ಅಸೆಸ್ ಮೆಂಟನ್ನು ನೀಡುವಂತೆ ಕೋರಿರುತ್ತೇನೆ. ಅದೇ ದಿನ ಚಾಸಾ.21 ರವರಿಗೆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಂಡುವಂತೆ ಮನವಿ ಸಲ್ಲಿಸಿರುತ್ತೇನೆ. ಆರೋಪಿಯು ಪೊಲೀಸ್ ಕಾನ್ಸ್ ಟೇಬಲ್ ತರಬೇತಿಯಲ್ಲಿದ್ದು ಕೃತ್ಯ ನಡೆದ ದಿನ ಆತ ತರಬೇತಿಗೆ ಹಾಜರಾಗಿದ್ದನೇ ಇಲ್ಲವೇ ಎಂಬುದರ ಬಗ್ಗೆ ದಾಖಲೆಯನ್ನು ನೀಡುವಂತೆ ಕಡೂರು ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿರುತ್ತೇನೆ.

16. ದಿನಾಂಕ 29.08.2019 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತ ಮಗುವಿನ ಭಾಗಶಃ ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ.35 ರಂತೆ ಪಡೆದುಕೊಂಡಿರುತ್ತೇನೆ. ನಿಪಿ.35 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.35(ಬಿ) ಎಂದು ಗುರುತಿಸಲಾಯಿತು.

17. ನಂತರ ಅದೇ ದಿನ ಮಗುವಿನ ಮರಣೋತ್ತರ ಕಾಲಕ್ಕೆ ವೈದ್ಯರು ಸಂಗ್ರಹಿಸಿದ್ದ viscera ವಸ್ತುಗಳು ಮತ್ತು ಮಗುವಿನ ದೇಹದ 6 ಅಂಗಗಳ ಮಾದರಿಗಳನ್ನು ಸಿಬ್ಬಂದಿ ತಂದು ಹಾಜರುಪಡಿಸಿದ್ದು ಅವುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 41/2019 ಮತ್ತು 42/2019 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಗಳನ್ನು ಅವುಗಳನ್ನು ಕ್ರಮವಾಗಿ ನಿಪಿ.56 ಮತ್ತು ನಿಪಿ.57 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು 56(ಎ) ಮತ್ತು ನಿಪಿ.57(ಎ) ಎಂದು ಗುರುತಿಸಲಾಯಿತು.

18. ನಿಪಿ.57 ರಲ್ಲಿ ನಮೂದಿಸಿರುವ ಮಾದರಿಗಳನ್ನು ಹಾಸನ ವೈದ್ಯಕೀಯ ವಿದ್ಯಾಲಯದ Histopathology ವಿಭಾಗಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಮತ್ತು viscera ವಸ್ತುಗಳನ್ನು ಆರ್ ಎಫ್ ಎಸ್ ಎಲ್ ಮಂಗಳೂರು ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಮಗುವಿನ ಮೃತ ದೇಹದಿಂದ ಸಂಗ್ರಹಿಸಿದ್ದ ಅದರ ಬಲಕಾಲಿನ ತೊಡೆಯ ಮೂಳೆಯನ್ನು ಡಿ ಎನ್ ಎ ಪರೀಕ್ಷೆಗಾಗಿ ಎಫ್ ಎಸ್ ಎಲ್ ಮಡಿವಾಳ ಬೆಂಗಳೂರು ರವರಿಗೆ ಕಳುಹಿಸಿರುತ್ತೇನೆ.

19. ದಿನಾಂಕ 17.09.2019 ರಂದು ಚಾಸಾ.20 ರವರು ಜೋಳದಾಳ್ ಪಾಳ್ಯ ಗ್ರಾಮದ ಸುಧೀರ್ ಗೌಡರವರಿಗೆ ಸೇರಿದ ಕಾಫಿ ತೋಟದ ಕೂಲಿ ಲೈನ್ ನ ಹೆಸರಿನಲ್ಲಿ ಮೈಲಿಮನೆ ಗ್ರಾಮಪಂಚಾಯ್ತಿಯಲ್ಲಿ ಯಾವುದೇ ದಾಖಲೆ ಇರುವುದಿಲ್ಲವೆಂದು ನೀಡಿದ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.58 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ.58(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು) ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ದಿನಾಂಕಃ **02.03.2023** ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

20. ದಿನಾಂಕ 19.09.2019 ರಂದು ಕಡೂರು ತರಬೇತಿ ಶಾಲೆಯ ಪ್ರಾಂಶುಪಾಲರು ಆರೋಪಿ ದಿನಾಂಕ 03.08.2019 ರ ರಾತ್ರಿ 8.00 ಗಂಟೆಯಿಂದ ಕಡೂರು ಪೊಲೀಸ್ ತರಬೇತಿ ಶಾಲೆಯ ಘಟಕದಿಂದ ಅನಧೀಕೃತವಾಗಿ ಗೈರು ಹಾಜರಾಗಿರುತ್ತಾನೆ ಎಂದು ವರದಿ ಮತ್ತು ಹಾಜರಾತಿ ವಹಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ವರದಿ ಮತ್ತು ಹಾಜರಾತಿ ವಹಿಯ ದೃಢೀಕೃತ ಪ್ರತಿಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.59 ಮತ್ತು ನಿಪಿ.60 ಎಂದು ನಿಪಿ.59 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.59(ಎ) ಎಂದು ಗುರುತಿಸಲಾಯಿತು.

21. ದಿನಾಂಕ 17.10.2019 ರಂದು ಚಿಕ್ಕಮಗಳೂರು ಪೊಲೀಸ್ ಅಧೀಕ್ಷಕರಿಗೆ ಮನವಿ ಸಲ್ಲಿಸಿ ಆರೋಪಿ ಉಪಯೋಗಿಸುತ್ತಿದ್ದ ಮೊಬೈಲ್ ಸಂಖ್ಯೆ 7892615522 ಮತ್ತು 9449750572 ಮತ್ತು ಪ್ರಾಸಾ.3 ನಾಗರಾಜ್ ರವರು ಉಪಯೋಗಿಸುತ್ತಿದ್ದ ಮೊಬೈಲ್ ಸಂಖ್ಯೆ 8296823859 ಮತ್ತು ಪ್ರಾಸಾ.9 ರವರು ಉಪಯೋಗಿಸುತ್ತಿದ್ದ ಮೊಬೈಲ್ ಸಂಖ್ಯೆ 9606417769 ಗಳಿಗೆ ಸಂಬಂಧಿಸಿದ ಸಿ ಎ ಎಫ್ ಮತ್ತು ಸಿ ಡಿ ಆರ್ ಗಳನ್ನು ಸಂಬಂಧಿಸಿದವರಿಂದ ದೊರಕಿಸಿಕೊಡುವಂತೆ ಮನವಿ ಸಲ್ಲಿಸಿರುತ್ತೇನೆ.

22. ಆರೋಪಿಯಿಂದ ಈ ಹಿಂದೆ ಅಮಾನತುಪಡಿಸಿಕೊಂಡಿದ್ದ ನಿಪಿ.27 ಮತ್ತು ನಿಪಿ.28 ಹಾಳೆಗಳಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ತಜ್ಞರಿಗೆ ಕಳುಹಿಸಿ ತಾಳೆ ಮಾಡಿ ನೋಡಲು ದಿನಾಂಕ 18.10.2019 ರಂದು ಪ್ರಾಸಾ.4 ರವರ ಮಾದರಿ ಹೆಬ್ಬೆಟ್ಟಿನ ಗುರುತನ್ನು ಪಡೆಯಲು ಪ್ರಾಸಾ.3 ಮತ್ತು ಪ್ರಾಸಾ.8 ರವರಿಗೆ ನಿಪಿ.17 ರಂತೆ ನೋಟೀಸನ್ನು ಜಾರಿ ಮಾಡಿ ಅವರನ್ನು ಪಂಚರನ್ನಾಗಿ ನನ್ನ ಕಚೇರಿಗೆ ಬರಮಾಡಿಕೊಂಡು ಅವರ ಸಮಕ್ಷಮ ಪ್ರಾಸಾ.4 ರವರ ಎಡಗೈನ ಹೆಬ್ಬೆಟ್ಟಿನ ಆರು ಮಾದರಿ ಗುರುತುಗಳನ್ನು ಒಂದು ಬಿಳಿಯ ಹಾಳೆಯಲ್ಲಿ ಪಡೆದುಕೊಂಡು ಅವುಗಳಿಗೆ ಕ್ರಮ ಸಂಖ್ಯೆ 1 ರಿಂದ 6 ರಂತೆ ನೀಡಿ ಸದರಿ ಹಾಳೆಯ ಮೇಲೆ R1 ಎಂದು ನಮೂದು ಮಾಡಿರುತ್ತೇನೆ ಮತ್ತು ಸದರಿ ಹಾಳೆಯ ಮೇಲೆ ಮೇಲೆ ಹೇಳಿದ ಪಂಚರ ಸಹಿಗಳನ್ನು ಪಡೆದು ನಾನು ಸಹಿ ಮಾಡಿರುತ್ತೇನೆ. ಸದರಿ ಹಾಳೆಯನ್ನು ನೋಡುತ್ತಿದ್ದು ಅದನ್ನು ನಿಪಿ.61 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.61(ಎ) ಎಂದು

ಗುರುತಿಸಲಾಯಿತು. ಆ ಬಗ್ಗೆ ನಿಪಿ.18 ರಂತೆ ಬೆಳಿಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿಪಿ.17 ಮತ್ತು ನಿಪಿ.18 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.17(ಬಿ) ಮತ್ತು ನಿಪಿ.18(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.11 ರಂತೆ ಫೋಟೋವನ್ನು ತೆಗೆಸಿರುತ್ತೇನೆ. ನಿಪಿ.18 ರ ಕಾಲಕ್ಕೆ ವಶಪಡಿಸಿಕೊಂಡ ಫ್ರಾಸಾ.4 ರವರ 6 ಹೆಬ್ಬೆಟ್ಟಿನ ಗುರುತುಗಳಿರುವ ಹಾಳೆಯನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 51/2019 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.62 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.62(ಎ) ಎಂದು ಗುರುತಿಸಲಾಯಿತು.

23. ನಂತರ ಅದೇ ದಿನ ಫ್ರಾಸಾ.10 ರವರ ಹೇಳಿಕೆಯನ್ನು ನಿಪಿ.20 ರಂತೆ, ಫ್ರಾಸಾ.9 ರವರ ಹೇಳಿಕೆಯನ್ನು ನಿಪಿ.19 ರಂತೆ ಪಡೆದುಕೊಂಡಿರುತ್ತೇನೆ ಮತ್ತು ಅದೇ ದಿನ ಫ್ರಾಸಾ.10 ರವರಿಂದ ಕೃತ್ಯ ನಡೆದ ಸ್ಥಳದ ಕೂಲಿ ಲೈನ್ ಮನೆಗೆ ಸಂಬಂಧಿಸಿದ ಪಹಣಿ ಪ್ರತಿಯನ್ನು ನಿಪಿ.33 ರಂತೆ ಪಡೆದುಕೊಂಡಿರುತ್ತೇನೆ. ನಿಪಿ.33 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.33(ಎ) ಎಂದು ಗುರುತಿಸಲಾಯಿತು.

24. ತನಿಖಾ ಕಾಲದಲ್ಲಿ ತೆಗೆದ ಫೋಟೋಗಳಿಗೆ ಸಂಬಂಧಿಸಿದಂತೆ ಫ್ರಾಸಾ.17 ರವರಿಂದ ನಿಪಿ.46 ರಂತೆ ಪ್ರಮಾಣ ಪತ್ರವನ್ನು ಮತ್ತು ನಿಪಿ.47 ರಂತೆ ಸಿಡಿಯನ್ನು ಪಡೆದುಕೊಂಡಿರುತ್ತೇನೆ. ನಿಪಿ.46 ರಲ್ಲಿರುವ ಸಾಕ್ಷಿಯ

ಸಹಿಯನ್ನು ನಿಪಿ.46(ಬಿ) ಎಂದು ಗುರುತಿಸಲಾಯಿತು.

25. ದಿನಾಂಕ 19.10.2019 ರಂದು ಚಾಸಾ.21 ರವರಿಂದ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ನಿಪಿ.34 ರಂತೆ ಪಡೆದುಕೊಂಡಿರುತ್ತೇನೆ. ಅದೇ ದಿನ ಪೊಲೀಸ್ ಅಧೀಕ್ಷಕರು, ಕರ್ನಾಟಕ ರಾಜ್ಯ ಬೆರಳು ಮುದ್ರೆ ಸಂಗ್ರಹಾಲಯ, ಮಡಿವಾಳ ಬೆಂಗಳೂರು ರವರಿಗೆ ತನಿಖಾ ಕಾಲದಲ್ಲಿ ಅಮಾನತುಪಡಿಸಿಕೊಂಡಿದ್ದ ನಿಪಿ.27, ನಿಪಿ.28 ಮತ್ತು ನಿಪಿ.61 ರಲ್ಲಿರುವ ಹೆಬ್ಬೆಟ್ಟಿನ ಗುರುತುಗಳನ್ನು ತಾಳೆ ಮಾಡಿ ವರದಿ ನೀಡುವಂತೆ ಮನವಿ ಸಲ್ಲಿಸಿ ಸದರಿ ದಾಖಲೆಗಳನ್ನು ಮತ್ತು ಸದರಿ ವಸ್ತುಗಳ ವಿವರಗಳ invoice ಮತ್ತು ಮಾದರಿ ಸಹಿ ಮತ್ತು ಸೀಲು ಇರುವ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ.63 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.63(ಎ) ಎಂದು ಗುರುತಿಸಲಾಯಿತು.

26. ನಂತರ ಅದೇ ದಿನ ಆರೋಪಿ, ಫ್ರಾಸಾ,3 ಮತ್ತು ಫ್ರಾಸಾ.9 ರವರಿಗೆ ಸಂಬಂಧಿಸಿದ ಮೇಲೆ ಹೇಳಿದ ಮೊಬೈಲ್ ಸಂಖ್ಯೆಗಳಿಗೆ ಸಂಬಂಧಿಸಿದ Customer Application Form ಮತ್ತು Call Details report ಗಳನ್ನು ಎಸ್ ಪಿ ಚಿಕ್ಕಮಗಳೂರು ರವರ ಕಚೇರಿಯಿಂದ ಇ ಮೇಲ್ ಮೂಲಕ ಪಡೆದುಕೊಂಡಿರುತ್ತೇನೆ. ಸದರಿ Customer Application Form ಮತ್ತು Call Details report ಗಳನ್ನು ನೋಡುತ್ತಿದ್ದು ಆರೋಪಿಗೆ ಸಂಬಂಧಿಸಿದ Customer Application Form ಮತ್ತು Call Details report ನ್ನು ನಿಪಿ.64 ಎಂದು, ಫ್ರಾಸಾ.3 ರವರಿಗೆ

ಸಂಬಂಧಿಸಿದ Customer Application Form ಮತ್ತು Call Details report ನ್ನು ನಿಪಿ.65 ಎಂದು, ಪ್ರಾಸಾ.9 ರವರಿಗೆ ಸಂಬಂಧಿಸಿದ Customer Application Form ಮತ್ತು Call Details report ನ್ನು ನಿಪಿ.66 ಎಂದು ಗುರುತಿಸಲಾಯಿತು. ನಿಪಿ.65 ರ ಪ್ರಕಾರ ಪ್ರಾಸಾ.3 ನಾಗರಾಜ್ ರವರು ಬಳಸುತ್ತಿದ್ದ ಮೊಬೈಲ್ ಸಂಖ್ಯೆ ಪ್ರಾಸಾ.4 ರವರ ತಾಯಿ ಮತ್ತು ಪ್ರಾಸಾ.3 ರವರ ಅತ್ತೆಯಾದ ಬೀಬವ್ವ ರವರ ಹೆಸರಿನಲ್ಲಿ ಇರುತ್ತದೆ. ಸದರಿ ಕಾಲ್ ಡಿಟೇಲ್ಸ್ ಗೆ ಸಂಬಂಧಿಸಿದ ಸಿಡಿಯನ್ನು ನೋಡುತ್ತಿದ್ದು ಅದನ್ನು ನಿಪಿ.67 ಎಂದು ಗುರುತಿಸಲಾಯಿತು.

27. ದಿನಾಂಕ 28.10.2019 ರಂದು ಭಾರತಿ ಏರ್ ಟೆಲ್ ಲಿಮಿಟೆಡ್ ಮತ್ತು ರಿಲಯನ್ಸ್ ಜಿಯೋ ಇನ್ಫೋ ಕಮ್ಯುನಿಕೇಷನ್ ಲಿಮಿಟೆಡ್ ನ ನೋಡಲ್ ಅಧಿಕಾರಿಗಳಿಗೆ 8296823589, 7892615522, 9606417769 ಮೊಬೈಲ್ ಸಂಖ್ಯೆಗಳಿಗೆ ಸಂಬಂಧಿಸಿದ ಸಿ ಎ ಎಫ್, ಸಿ ಡಿ ಆರ್ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ದೃಢೀಕರಣ ಪತ್ರಗಳನ್ನು ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ಸದರಿ ಮನವಿ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.68 ರಿಂದ ನಿಪಿ.70 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ.68(ಎ) ಯಿಂದ ನಿಪಿ.70(ಎ) ಎಂದು ಗುರುತಿಸಲಾಯಿತು.

28. ಮೃತ ಮಗು ಅಮಿಷಾ ರವರ ನಿಜವಾದ ತಂದೆಯನ್ನು ಪತ್ತೆಹಚ್ಚುವ ಸಲುವಾಗಿ ಆರೋಪಿ ಮತ್ತು ಮೃತ ಮಗುವಿನ ತಾಯಿ ಪ್ರಾಸಾ.4 ರಸುಲ್ಲಾ ಬೇಗಂ ರವರ ಡಿ ಎನ್ ಎ ಪರೀಕ್ಷೆ

ನಡೆಸಲು ನ್ಯಾಯಾಲಯದ ಅನುಮತಿ ಪಡೆಯುವುದನ್ನು ಬಾಕಿ ಇರಿಸಿ ಮತ್ತು ಆರ್ ಎಫ್ ಎಸ್ ಎಲ್, Histopathology ಮತ್ತು ಬೆರಳಚ್ಚು ತಜ್ಞರ ವರದಿಯನ್ನು ಬಾಕಿ ಇರಿಸಿ ಮತ್ತು ಆರೋಪಿ ಮತ್ತು ಸಾಕ್ಷಿದಾರರಾದ ಪ್ರಾಸಾ.3 ಮತ್ತು ಪ್ರಾಸಾ.9 ರವರಿಗೆ ಸಂಬಂಧಿಸಿದ ಸಿ ಡಿ ಆರ್ ಗಳನ್ನು ಸಂಬಂಧಪಟ್ಟ ಸರ್ವೀಸ್ ಪ್ರೊವೈಡರ್ ಗಳಿಂದ ಪಡೆಯುವುದನ್ನು ಬಾಕಿ ಇರಿಸಿ ಅಲ್ಲಿಯವರೆಗೆ ಆದ ತನಿಖೆಯಲ್ಲಿ ಆರೋಪಿಯ ವಿರುದ್ಧ ಆರೋಪ ಸಾಬೀತಾಗಿದ್ದ ಕಾರಣ ಆತನ ವಿರುದ್ಧ ದಿನಾಂಕ 29.10.2019 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿ ಪರವಾಗಿಃ</u>

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ